■ ವಿಶಾಖ ಎನ್.

# ಎಲ್ಲವೂ ಹನುಮನ ಕೃಪೆ...




ಭಕ್ತಿ ಮಾರ್ಗದ ಮಾತು ಅಯೋಧ್ಯೆಯ ಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯ ನಂತರ ಜೋರಾಗಿದೆ. ತೆಲುಗು ಸಿನಿಮಾ ನಿರ್ದೇಶಕ ಪ್ರಶಾಂತ್ ಶರ್ಮ ಅವರ ನುಡಿಯೂ ಅದೇ ಮಾರ್ಗದ್ದು. ಅವರ ನಿರ್ದೇಶನದ 'ಹನುಮ್ಯಾನ್' ಸಿನಿಮಾ ಗಲ್ಲಾಪೆಟ್ಟಿಗೆಯಲ್ಲಿ ಸದ್ದು ಮಾಡುತ್ತಿದೆ. 200 ಕೋಟಿ ರೂಪಾಯಿ ಗಳಿಕೆ ಗಡಿ ದಾಟಿ ಮುನ್ನುಗ್ಗುತ್ತಿದೆ. ಜನವರಿ 12ರಂದು ಈ ಸಿನಿಮಾ ತೆರೆಕಂಡಿದೆ; ಅದೂ ಇನ್ನೇನು ಸಂಕ್ರಾಂತಿ ಎದುರಲ್ಲಿ ಇರುವಾಗ. ತೆಲುಗಿನಲ್ಲಿ ಮಹೇಶ್ ಬಾಬು ಅಭಿನಯದ 'ಗುಂಟೂರು ಕಾರಂ' ಚಿತ್ರ ಬಿಡುಗಡೆಯಾಗಿದ್ದು ಕೂಡ ಆಗಲೇ. ಜೊತೆಗೆ ತಮಿಳಿನಲ್ಲಿ 'ಕ್ಯಾಪ್ಟನ್ ಮಿಲ್ಲರ್' ಅದೇ ದಿನ ತೆರೆಗೆ ಬಂತು. ಹಿಂದಿ ಹಾಗೂ ತಮಿಳಿನಲ್ಲಿ ಏಕಕಾಲದಲ್ಲಿ ಬಿಡುಗಡೆಯಾದ 'ಮೆರ್ರಿ ಕ್ರಿಸ್ಮಸ್' ಮೇಲೂ ಜನರ ನಿರೀಕ್ಷೆ ಇತ್ತು. ಆದರೆ, ತೇಜ ಸಜ್ಜ ನಾಯಕರಾಗಿದ್ದ 'ಹನುಮ್ಯಾನ್' ಸಿನಿಮಾ ಕುರಿತು ಹೆಚ್ಚಿನ ನಿರೀಕ್ಷೆಗಳು ಖುದ್ದು ನಿರ್ದೇಶಕರಿಗೇ ಇರಲಿಲ್ಲ. ಹಾಕಿರುವ ಬಂಡವಾಳಕ್ಕೆ ಮೋಸ ಇಲ್ಲದಂತೆ ಗಳಿಕೆ ಕಂಡರೆ ಸಾಕು, ಒಂದಿಷ್ಟು ಲಾಭ ಆದರೆ ಸಂತೋಷ ಎಂದು ಅವರು ಅಂದುಕೊಂಡಿದ್ದರು. ಅದೃಷ್ಟ ಅವರ ಕೈ ಹಿಡಿಯಿತು. ಇನ್ನೊಂದೆಡೆ, ಮಹೇಶ್ ಬಾಬು ಸಿನಿಮಾ ನಿರೀಕ್ಷಿತ ಯಶಸ್ಸು ಕಾಣಲಿಲ್ಲ.

'ಸಾಕ್ಷಾತ್ ಹನುಮಂತನೇ ಮಧ್ಯ ಪ್ರವೇಶಿಸಿ ನನ್ನ ಸಿನಿಮಾ ಗೆಲ್ಲಿಸಿದನೇನೋ ಅನ್ನಿಸುತ್ತಿದೆ. ನಾವು ಆರು ತಿಂಗಳ ಹಿಂದೆಯೇ ಈ ಸಿನಿಮಾ ಬಿಡುಗಡೆಗೆ ದಿನಾಂಕ ಗೊತ್ತು ಮಾಡಿದ್ದೆವು. ಅಯೋಧ್ಯೆಯಲ್ಲಿ ರಾಮ ಮಂದಿರದಲ್ಲಿ ಬಲರಾಮನ ಪ್ರಾಣ ಪ್ರತಿಷ್ಠಾಪನೆಗೆ ಹತ್ತು ದಿನ ಇರುವಾಗ ನಮ್ಮ ಚಿತ್ರ ಜನರ ಎದುರು ಬರುತ್ತದೆ ಎಂದು ಆಗ ಗೊತ್ತಿರಲಿಲ್ಲ. ಎಲ್ಲವೂ ಹನುಮ ಕೃಪೆ' ಎಂದು ಪ್ರಶಾಂತ್ ಶರ್ಮ ಭಾವುಕತೆಯಿಂದ ಹೇಳಿದ್ದಾರೆ.

ಪ್ರಶಾಂತ್ ಶರ್ಮ 2018ರಲ್ಲಿ ನಿರ್ದೇಶಿಸಿದ್ದ 'ಆವ್' ತೆಲುಗು ಚಿತ್ರದ ಸ್ಪೆಷಲ್ ಎಫೆಕ್ಟ್ಸ್‌ಗಾಗಿ ರಾಷ್ಟ್ರಪ್ರಶಸ್ತಿ ಸಂದಿತು. ಆ ಚಿತ್ರದ ನಿರ್ಮಾಪಕರಲ್ಲಿ ನಟ ನಾನಿ ಕೂಡ ಒಬ್ಬರೆನ್ನುವುದು ಗಮನಾರ್ಹ. 2021ರಲ್ಲಿ 'ಝೂಂಬಿ ರೆಡ್ಡಿ' ಎಂಬ ಭಿನ್ನ ಕಥಾಹಂದರದ ಸಿನಿಮಾ ನಿರ್ದೇಶಿಸಿದರು. ಅದರಲ್ಲೂ ತೇಜ ಸಜ್ಜ ಅಭಿನಯ ಇತ್ತು.

'ನನಗೆ ಹಿಂದಿನ ಚಿತ್ರಗಳಿಗಿಂತ ಭಿನ್ನವಾದ ದೇಸಿ ಫ್ಯಾಂಟಸಿ ಕತೆ ಹೇಳುವ ಬಯಕೆ ಇತ್ತು. ನನ್ನ ಸಿನಿಮಾದ ಕೇಂದ್ರ ಪಾತ್ರದ ಬಗೆಗೆ ಯೋಚಿಸಿದಾಗಲೆಲ್ಲ ಹನುಮನೇ ನೆನಪಾಗುತ್ತಿದ್ದ. ಅವನ ಕೃಪೆ ನನ್ನ ಮೇಲೆ ಈ ಪರಿಯಾಗಿ ಇರುತ್ತದೆ ಎಂದುಕೊಂಡಿರಲಿಲ್ಲ' – ಹೀಗೆ ಹೇಳುತ್ತಾ ಪ್ರಶಾಂತ್ ಕಣ್ಣುಮುಚ್ಚಿ ಪ್ರಾರ್ಥಿಸುವ ಭಾವದಲ್ಲಿ ಕಂಡರು.

ಅವರು ಅದಾಗಲೇ ಹನುಮಾನ್ ಸಿನಿಮಾದ ಎರಡನೇ ಭಾಗ ಚಿತ್ರೀಕರಿಸುವ ಸಿದ್ಧತೆಯಲ್ಲಿ ಮುಳುಗಿದ್ದಾರೆ. ಅಷ್ಟು ಆತ್ಮವಿಶ್ವಾಸವನ್ನು ಚಿತ್ರದ ಗೆಲುವು ಅವರಿಗೆ ದಕ್ಕಿಸಿಕೊಟ್ಟಿದೆ. ■



# ವರುಣ್ ಪ್ರೇಮ ಪ್ರಸಂಗದ ಫ್ಲ್ಯಾಷ್‌ಬ್ಯಾಕ್

ವರುಣ್ ಧವನ್ ಹಾಗೂ ನತಾಶ ದಲಾಲ್ ಮೂರನೇ ವಿವಾಹ ವಾರ್ಷಿಕೋತ್ಸವ ಇತ್ತೀಚೆಗೆ ನಡೆಯಿತು. ನಟಿ ಕರೀನಾ ಕಪೂರ್ ರೇಡಿಯೊ ವಾಹಿನಿಯೊಂದಕ್ಕೆ ನಟ ವರುಣ್ ಸಂದರ್ಶನ ಮಾಡಿದರು. ಅದರಲ್ಲಿ ವರುಣ್ ತಮ್ಮ ಪ್ರೇಮ ಪ್ರಸಂಗವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು.

ವರುಣ್ ಹಾಗೂ ನತಾಶ ಬಾಲ್ಯದಿಂದ ಸ್ನೇಹದಲ್ಲಿ ಇದ್ದವರು. ಹನ್ನೊಂದು, ಹನ್ನೆರಡನೇ ವಯಸ್ಸಿನಲ್ಲಿ ಇಬ್ಬರೂ ಇನ್ನಷ್ಟು ಆಪ್ತರಾಗಿದ್ದರು. ಆದರೆ, ಅದನ್ನು ನತಾಶ ಪ್ರೇಮ ಎಂದು ಭಾವಿಸಿರಲಿಲ್ಲ.

ಒಮ್ಮೆ ಶಾಲೆಯ ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ನತಾಶ ನಡೆದು ಸಾಗುವಾಗ, ಅವರನ್ನು ವರುಣ್ ಕಣ್ಣು ಎವೆಯಿಕ್ಕದೆ ನೋಡಿದ್ದರು. ತಮ್ಮ ಮನದನ್ನೆ ಅವರೇ ಎಂದು ಮೊದಲು ತೀವ್ರವಾಗಿ ಅನಿಸಿದ್ದೇ ಆಗ. ನತಾಶ ಅವರಿಗೆ ಆ ಸಂಗತಿಯನ್ನು ಹೇಳಿದರಾದರೂ ತಕ್ಷಣಕ್ಕೆ ಆಕೆ ಪ್ರೇಮ ಒಪ್ಪಿಕೊಳ್ಳಲಿಲ್ಲ. ಮುಂದೆ ಮೂರ್ನಾಲ್ಕು ಸಲ ಪ್ರೇಮ ನಿವೇದನೆ ಮಾಡಿದರೂ ವರುಣ್ ಅವರಿಗೆ ಎದುರಾದದ್ದು ತಿರಸ್ಕಾರವೇ. ಕೊನೆಗೆ 2021ರಲ್ಲಿ ಇಬ್ಬರೂ ಮದುವೆಯಾದರು. ಅಲ್ಲಿಗೆ ತಿರಸ್ಕಾರ ಪ್ರಸಂಗಗಳು ಪ್ರೇಮವಿವಾಹವಾಗಿ ಪರಿವರ್ತನೆಯಾದದ್ದು ಸ್ಪಷ್ಟವಾಗಿತ್ತು. 'ಬಹಳ ಜನ ಸಿನಿಮಾ ನಟರಾದವರಿಗೆ ಪ್ರೇಮ ನಿವೇದನೆ ಸಲೀಸು ಎಂದು ತಪ್ಪಾಗಿ ಭಾವಿಸಿರುತ್ತಾರೆ. ವಸ್ತುಸ್ಥಿತಿ ಹಾಗಿರುವುದಿಲ್ಲ. ನನ್ನ ವಿಷಯದಲ್ಲಿಯಂತೂ ಅದು ತಪ್ಪು ಕಲ್ಪನೆ. ಮೂರ್ನಾಲ್ಕು ಸಲ ನತಾಶ ನನ್ನ ಪ್ರೇಮದ ಅರಿಕೆಯನ್ನು ತಾತ್ಸಾರದಿಂದ ಕಂಡಿದ್ದಳು. ಹಾಗೆಂದು ನಾನು ವಿಶ್ವಾಸ ಕಳೆದುಕೊಳ್ಳಲಿಲ್ಲ. ಒಳ್ಳೆಯ ಕಾಲ ಬಂದೇ ಬರುತ್ತದೆ ಎಂದು ಕಾಯತೊಡಗಿದೆ. ಈಗ ಎಲ್ಲವೂ ಶುಭವಾಗಿದೆ' ಎಂದು ವರುಣ್ ಅನುಭವ ಹಂಚಿಕೊಂಡರು. ■